# ಇಂದು ಸಿಡಿ ಕ್ಲೈಮ್ಯಾಕ್ಸ್?

ವಿ.ವಾ. 30-3-21

## ಯುವತಿ ಹಾಜರಿಗೆ ಕೋರ್ಟ್ ಅನುಮತಿ ರಕ್ಷಣೆ ಕೋರಿ ಸಿಜೆಗೆ ಪತ್ರ ಬರೆದ ಲೇಡಿ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ದಿನಕ್ಕೊಂದು, ಗಂಟೆಗೊಂದು ನಾಟಕೀಯ ತಿರುವುಗಳನ್ನು ಪಡೆದುಕೊಳ್ಳುತ್ತ ಮೆಗಾ ಧಾರಾವಾಹಿಯಂತೆ ಸಾಗುತ್ತಿರುವ ಅಶ್ಲೀಲ ಸಿಡಿ ಪ್ರಕರಣ ಮತ್ತಷ್ಟು ಗಂಭೀರ ಸ್ವರೂಪ ಪಡೆದುಕೊಂಡಿದೆ. ಕಳೆದ 27 ದಿನಗಳಿಂದ ಭೂಗತವಾಗಿದ್ದುಕೊಂಡೇ ಸರ್ಕಾರವನ್ನು, ಎಸ್ಐಟಿ ಅಧಿಕಾರಿಗಳನ್ನು ಸುಸ್ತು ಹೊಡೆಸಿರುವ ಸಿಡಿ ಯುವತಿ ಮಾಜಿ ಸಚಿವರ ವಿರುದ್ಧ ಜೀವಬೆದರಿಕೆ ಆರೋಪ ಮಾಡಿ, ತನಗೆ ರಕ್ಷಣೆ ಕೊಡುವಂತೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಿಗೆ ಪತ್ರ ಬರೆದಿದ್ದಾಳೆ. ಮಂಗಳವಾರ ಯುವತಿ ಕೆಳ ನ್ಯಾಯಾಲಯದ ನ್ಯಾಯಾಧೀಶರ ಸಮ್ಮುಖ ಹಾಜರಾಗುವ ನಿರೀಕ್ಷೆ ಇದೆ. ಹಾಗಾದಲ್ಲಿ ಪ್ರಕರಣ ಒಂದು ತಾರ್ಕಿಕ ಘಟ್ಟ ತಲುಪುವ ಸಾಧ್ಯತೆ ಇದೆ.

ಶನಿವಾರ ಸಿಡಿ ಯುವತಿ ಬಿಡುಗಡೆ ಮಾಡಿದ್ದ ವಿಡಿಯೋದಲ್ಲಿ ನ್ಯಾಯಾಧೀಶರ ಮುಂದೆಯೇ ಹೇಳಿಕೆ ನೀಡುವುದಾಗಿ ಹೇಳಿದ್ದ ಹಿನ್ನೆಲೆಯಲ್ಲಿ ಯುವತಿ ಪರ ವಕೀಲ ಜಗದೀಶ್ ಸೋಮವಾರ ಬೆಳಗ್ಗೆ ಮ್ಯಾಜಿಸ್ಟ್ರೇಟ್ ಕೋರ್ಟ್‌ನ ಡೆಪ್ಯೂಟಿ ರಿಜಿಸ್ಟ್ರಾರ್‌ರನ್ನು ಭೇಟಿಯಾಗಿ ಸಿಆರ್‌ಪಿಸಿ ಸೆಕ್ಷನ್ 164ರಡಿ ಯುವತಿಗೆ ಹೇಳಿಕೆ ದಾಖಲಿಸಲು ಅನುಮತಿ ನೀಡುವಂತೆ ಮನವಿ ಮಾಡಿದರು. ಡೆಪ್ಯೂಟಿ ಸಬ್ ರಿಜಿಸ್ಟ್ರಾರ್ ಸಂಜೆ ವೇಳೆಗೆ ಯುವತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಅನುಮತಿ ನೀಡಿದರು. ಈ ಬೆಳವಣಿಗೆಗಳ ಬೆನ್ನಲ್ಲೇ ಯುವತಿ ಪರ ವಕೀಲ ಜಗದೀಶ್, ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ತೆರಳಿ ಆದೇಶ ಪ್ರತಿ ಪಡೆಯಲು ಮುಂದಾಗಿದ್ದರು. ಭದ್ರತೆ ದೃಷ್ಟಿಯಿಂದ ಯುವತಿಯನ್ನು ನ್ಯಾಯಾಧೀಶರ ಮುಂದೆ ಹೇಗೆ? ಯಾವಾಗ ಹಾಜರುಪಡಿಸಬೇಕೆಂದು ಇ-ಮೇಲ್ ಮುಖಾಂತರ ತಿಳಿಸುವುದಾಗಿ ಡೆಪ್ಯೂಟಿ ರಿಜಿಸ್ಟ್ರಾರ್ ವಕೀಲ ಜಗದೀಶ್‌ಗೆ ಹೇಳಿದ್ದಾರೆ. ಹೀಗಾಗಿ ಮಂಗಳವಾರ 24ನೇ ಎಸಿಎಂಎಂ ಕೋರ್ಟ್‌ನಲ್ಲಿ ಪ್ರಕರಣದ ವಿಚಾರಣೆ ನಡೆಯಲಿದೆ. ➔ಪುಟ 5




ಬೆಂಗಳೂರಿನ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್.

### ಏನಾಗಬಹುದು?

- ಕೋರ್ಟ್ ಅನುಮತಿ ಹಿನ್ನೆಲೆಯಲ್ಲಿ ಯುವತಿ ಕೋರ್ಟ್‌ಗೆ ಹಾಜರು
- ನ್ಯಾಯಾಧೀಶರ ಮುಂದೆ ಹೇಳಿಕೆ ದಾಖಲಿಸಬಹುದು
- ನ್ಯಾಯಾಧೀಶರ ಸೂಚನೆ ಮೇರೆಗೆ ಎಸ್ಐಟಿ ಮುಂದೆ ಯುವತಿ ಹೇಳಿಕೆ ಕೊಡಬಹುದು
- ಕೋರ್ಟ್ ಸೂಚಿಸಿದರೆ ಯುವತಿ ಹೇಳಿಕೆ ದಾಖಲಿಸುವಾಗ ಆಕೆ ಪರ ವಕೀಲರು ಉಪಸ್ಥಿತರಿರಬಹುದು
- ಯುವತಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ ನಂತರ ಸ್ಥಳ ಮಹಜರಿಗೆ ಕರೆದೊಯ್ಯಬಹುದು
- ಯುವತಿ ಹೇಳಿಕೆ ಬಹಳ ಮುಖ್ಯ. ಆಕೆ ಹೇಳಿಕೆ ನೀಡದಿದ್ದರೆ ಪ್ರಕರಣದ ತನಿಖೆ ಮುಂದೆ ಸಾಗುವುದಿಲ್ಲ
- ಯುವತಿ ಹಾಗೂ ಆಕೆಯ ಕುಟುಂಬಸ್ಥರಿಗೆ ಸೂಕ್ತ ಪೊಲೀಸ್ ಭದ್ರತೆ ಒದಗಿಸಬೇಕಾಗುತ್ತದೆ

### ಸಿಜೆಗೆ ಬರೆದ ಪತ್ರದಲ್ಲೇನಿದೆ?

- ಅತ್ಯಂತ ಪ್ರಭಾವಿಯಾಗಿರುವ ಜಾರಕಿಹೊಳಿ ಸಾರ್ವಜನಿಕವಾಗಿ ನನಗೆ ಬೆದರಿಕೆ ಹಾಕಿದ್ದಾರೆ. ನನಗೆ ಹಾಗೂ ಪಾಲಕರಿಗೆ ಜೀವ ಭಯ ಇದೆ. ಸೂಕ್ತ ಭದ್ರತೆ ಒದಗಿಸುವಂತೆ ಎಸ್ಐಟಿಗೆ ಮನವಿ ಮಾಡಿದ್ದೇನೆ. ಆದರೆ, ಜಾರಕಿಹೊಳಿ ಅವರೊಂದಿಗೆ ಶಾಮೀಲಾಗಿರುವ ಎಸ್ಐಟಿ ನನಗಾಗಲಿ, ನನ್ನ ಪಾಲಕರಿಗಾಗಲಿ ರಕ್ಷಣೆ ಒದಗಿಸಲು ವಿಫಲವಾಗಿದೆ.
- ಜಾರಕಿಹೊಳಿ ಎಸ್ಐಟಿ ಮೂಲಕ ತಮ್ಮ ಪ್ರಭಾವ ಬಳಸಿ ನನ್ನ ಪಾಲಕರಿಗೆ ಬೆದರಿಕೆ ಹಾಕಿ ಒತ್ತಾಯಪೂರ್ವಕವಾಗಿ ತಮಗೆ ಬೇಕಾದ ರೀತಿಯಲ್ಲಿ ಹೇಳಿಕೆ ಕೊಡಿಸುತ್ತಿದ್ದಾರೆ. ಈ ಮೂಲಕ ಮ್ಯಾಜಿಸ್ಟ್ರೇಟ್ ಮುಂದೆ ಹಾಜರಾಗಿ ಹೇಳಿಕೆ ನೀಡದಂತೆ ನನ್ನನ್ನು ತಡೆಯಲು ಯತ್ನಿಸುತ್ತಿದ್ದಾರೆ. ➔ಪುಟ 5

# ಇಂದು ಸಿಡಿ ಪ್ರಕರಣದ ಕ್ಲೈಮ್ಯಾಕ್ಸ್?

ವಿ.ವಾ, 30.3.

ಮೊದಲನೇ ಪುಟದಿಂದ..

**ಭದ್ರತೆಗೆ 8 ಜನರ ತಂಡ:** ಯುವತಿಯ ಭದ್ರತೆಗಾಗಿ ಎಸ್‌ಐಟಿಯಿಂದ ಓರ್ವ ಸಬ್ ಇನ್‌ಸ್ಪೆಕ್ಟರ್ ಸೇರಿ 8 ಜನರ ತಂಡ ರಚಿಸಲಾಗಿದೆ. ಯುವತಿಯ ಹೇಳಿಕೆ ಹೇಗೆ ಪಡೆಯಬೇಕು ಎಂದು ಡೆಪ್ಯೂಟಿ ರಿಜಿಸ್ಟಾರ್ ಸೂಚಿಸುತ್ತಿದ್ದಂತೆ ಯುವತಿ ಹೇಳಿದ ಕಡೆ ತೆರಳಿ ಆಕೆಗೆ ಸೂಕ್ತ ಭದ್ರತೆ ನೀಡಿ, ಆಕೆಯನ್ನು ಕರೆದುಕೊಂಡು ಬರಲು ವಿಶೇಷ ಪೊಲೀಸ್ ತಂಡ ಸಿದ್ಧವಾಗಿದೆ. ಯುವತಿಯೇ ನೇರವಾಗಿ ಹಾಜರಾದರೂ ಈ ತಂಡ ಭದ್ರತೆ ನೀಡಲಿದೆ. ನ್ಯಾಯಾಲಯದ ಆದೇಶದಂತೆ ಯುವತಿಯನ್ನು ಹಾಜರುಪಡಿಸುತ್ತೇವೆ ಎಂದು ಪೊಲೀಸರು ತಿಳಿಸಿದ್ದಾರೆ.

**» ಎಸಿಎಂಎಂ ಕೋರ್ಟ್ ಸುತ್ತ-ಮುತ್ತ ಬಿಗಿ ಪೊಲೀಸ್ ಭದ್ರತೆ**

**ಹಾಜರುಪಡಿಸಲು ಸಿದ್ಧ:** ಯುವತಿಯನ್ನು ಕೋರ್ಟ್‌ಗೆ ಹಾಜರುಪಡಿಸಲು ಆದೇಶವಾಗಿದೆ. ಆದರೆ, ಎಲ್ಲಿ? ಯಾವಾಗ? ಹಾಜರುಪಡಿಸಬೇಕು ಎಂಬ ಮಾಹಿತಿಗಾಗಿ ಕಾಯುತ್ತಿದ್ದೇವೆ. ನ್ಯಾಯಾಧೀಶರ ಮನೆಗೆ ಹಾಜರುಪಡಿಸಬೇಕಾ? ಅಥವಾ ನ್ಯಾಯಾಲಯಕ್ಕೆ ಹಾಜರು ಪಡಿಸಬೇಕಾ? ಎಂಬುದನ್ನು ಇ-ಮೇಲ್ ಮೂಲಕ ತಿಳಿಸುತ್ತಾರೆ. ನಾವು ಈಗಲೇ ಯುವತಿಯನ್ನು ಹಾಜರುಪಡಿಸಲು ಸಿದ್ಧರಾಗಿದ್ದೇವೆ. ಯುವತಿಗೆ ಸೂಕ್ತ ಭದ್ರತೆ ಒದಗಿಸುವ ಬಗ್ಗೆ ಪೊಲೀಸರೊಂದಿದೆ ಚರ್ಚಿಸಿದ್ದೇವೆ. ಭದ್ರತೆ ಕಲ್ಪಿಸುವುದಾಗಿ ಲಿಖಿತ ರೂಪದಲ್ಲಿ ಪೊಲೀಸರು ನಮಗೆ ಕೊಟ್ಟಿದ್ದಾರೆ ಎಂದು ಜಗದೀಶ್ ಸುದ್ದಿಗಾರರಿಗೆ ವಿವರಿಸಿದ್ದಾರೆ.

**ಬಿಗಿ ಬಂದೋಬಸ್ತ್ :** ಸೋಮವಾರ ಯುವತಿ ಕೋರ್ಟ್ ಮುಂದೆ ಹಾಜರಾಗುವ ನಿರೀಕ್ಷೆಯಲ್ಲಿ ಎಸಿಎಂಎಂ ಕೋರ್ಟ್ ಸುತ್ತ-ಮುತ್ತ ಬಿಗಿ ಪೊಲೀಸ್ ಭದ್ರತೆ ಕಲ್ಪಿಸಲಾಗಿತ್ತು. ಪಶ್ಚಿಮ ವಿಭಾಗ ಡಿಸಿಪಿ ಸಂಜೀವ್.ಎಂ. ಪಾಟೀಲ್ ನೇತೃತ್ವದಲ್ಲಿ ಇಬ್ಬರು ಎಸಿಪಿ, ಐವರು ಇನ್‌ಸ್ಪೆಕ್ಟರ್, 10 ಸಬ್ ಇನ್‌ಸ್ಪೆಕ್ಟರ್ ಸೇರಿ ನೂರಾರು ಪೊಲೀಸರನ್ನು ನಿಯೋಜಿಸಲಾಗಿತ್ತು.

## ಎಸ್‌ಐಟಿ ರದ್ದು ಕೋರಿ ಪಿಐಎಲ್

**ಸಿಡಿ ಪ್ರಕರಣದ ತನಿಖೆಗೆ ಎಸ್‌ಐಟಿ ರಚಿಸಿ ನಗರ ಪೊಲೀಸ್ ಆಯುಕ್ತರು ಹೊರಡಿಸಿರುವ ಆದೇಶ ರದ್ದು ಕೋರಿ ಹೈಕೋರ್ಟ್‌ಗೆ ಪಿಐಎಲ್ ಸಲ್ಲಿಕೆಯಾಗಿದೆ. ನಗರದ ವಕೀಲೆ ಗೀತಾ ಮಿಶ್ರಾ ಅರ್ಜಿ ಸಲ್ಲಿಸಿದ್ದು, ಅರ್ಜಿಯಲ್ಲಿ ಶಾಸಕ ರಮೇಶ್ ಜಾರಕಿಹೊಳಿ, ಗೃಹ ಇಲಾಖೆ, ರಾಜ್ಯ ಪೊಲೀಸ್ ಮಹಾನಿರ್ದೇಶಕರು, ನಗರ ಪೊಲೀಸ್ ಆಯುಕ್ತರು, ಎಸ್‌ಐಟಿ, ಕಬ್ಬನ್‌ಪಾರ್ಕ್ ಹಾಗೂ ಸದಾಶಿವನಗರ ಠಾಣೆ ಪೊಲೀಸರನ್ನು ಪ್ರತಿವಾದಿಗಳನ್ನಾಗಿಸಲಾಗಿದೆ. ಅರ್ಜಿ ಇನ್ನಷ್ಟೇ ವಿಚಾರಣೆಗೆ ಬರಬೇಕಿದೆ.**

## ಸಿಜೆಗೆ ಬರೆದ ಪತ್ರದಲ್ಲೇನಿದೆ?

ಮೊದಲನೇ ಪುಟದಿಂದ...

- ಕ್ರಿಮಿನಲ್ ಹಿನ್ನೆಲೆಯುಳ್ಳ ಜಾರಕಿಹೊಳಿ ಪ್ರಕರಣಕ್ಕೆ ಸಂಬಂಧಿಸಿದ ಸಾಕ್ಷ್ಯ ನಾಶಪಡಿಸಲು ಮುಂದಾಗಿದ್ದಾರೆ. ತಮ್ಮ ವಿರುದ್ಧ ಹೇಳಿಕೆ ನೀಡದಂತೆ ತಡೆಯಲು ಬಹಿರಂಗವಾಗಿಯೇ ಬೆದರಿಕೆ ಹಾಕಿದ್ದಾರೆ.
- ರಮೇಶ್ ಜಾರಕಿಹೊಳಿ ನನ್ನನ್ನು ಯಾವಾಗ, ಎಲ್ಲಿ ಬೇಕಿದ್ದರೂ ಕೊಲೆ ಮಾಡುವ ಸಾಧ್ಯತೆ ಇದೆ. ಎಸ್‌ಐಟಿ ಸಹ ಅವರ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದು, ಸರ್ಕಾರವೂ ಅವರ ರಕ್ಷಣೆಗೆ ನಿಂತಿದೆ. ಎಸ್‌ಐಟಿ ಮೇಲಾಗಲಿ, ಸರ್ಕಾರದ ಮೇಲಾಗಲಿ ನನಗೆ ವಿಶ್ವಾಸವಿಲ್ಲ.
- ನನ್ನನ್ನು ಅಪಹರಿಸಲಾಗಿದೆ ಎಂದು ನನ್ನ ಪಾಲಕರ ಮೂಲಕ ಕೊಡಿಸಿರುವ ಹೇಳಿಕೆ ಸತ್ಯಕ್ಕೆ ದೂರವಾದದ್ದು. ಅವರ ಮೇಲೆ ಒತ್ತಡ ಹೇರಿ ಆ ರೀತಿ ಹೇಳಿಸಲಾಗಿದೆ. ನನ್ನ ಪಾಲಕರು ಜಾರಕಿಹೊಳಿ ಅವರ ಸೆರೆಯಾಳುಗಳಾಗಿದ್ದಾರೆ. ಮಾಜಿ ಸಚಿವರ ಪರವಾಗಿ ಕೆಲಸ ಮಾಡುತ್ತಿರುವ ಕಟ್ಟೀಮನಿ ಎಂಬ ಡಿವೈಎಸ್‌ಪಿ ಒಬ್ಬರು ನನ್ನ ಕುಟುಂಬದ ಮೇಲೆ ಒತ್ತಡ ಹೇರುತ್ತಿದ್ದಾರೆ.
- ಈ ಪ್ರಕರಣವನ್ನು ನ್ಯಾಯಾಲಯವೇ ಕೈಗೆತ್ತಿಕೊಂಡು, ನನಗೆ ಹಾಗೂ ನನ್ನ ಕುಟುಂಬಕ್ಕೆ ಭದ್ರತೆ ಒದಗಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು ಹಾಗೂ ಎಸ್‌ಐಟಿ ತನಿಖೆಯ್ನು ಮೇಲ್ವಿಚಾರಣೆ ನಡೆಸುವ ಮೂಲಕ ನ್ಯಾಯ ಒದಗಿಸಿಕೊಡಬೇಕು.